ನಾಮೆ ಕೇಳುತ್ತಿರುತ್ತಾರೆ. ಅವರ ರಾಜೀನಾಮೆ ಯಾವಾಗ ಕೊಡುತ್ತಾರೆ ?

ಶ್ರೀ ಗೋವಿಂದ ಪಿ. ಒಡೆಯರಾಜ್.— ಈ ವಿಷಯವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡ ಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿ ಪದವಿಗೆ ರಾಜೀನಾಮೆ ಕೊಡುವುದಿಲ್ಲ. ನನಗೆ ಅಡ್ವೋಕೇಟ್ ಜನರಲ್ ಆಗುವ ಇಚ್ಛೆಯೂ ಇಲ್ಲ. ಇಲ್ಲೇ ಇರುತ್ತೇನೆ. ಆದರ ಬಗ್ಗೆ ಆವರಿಗೆ ಸಂಶಯ ಬೇಡ. ಮಾನ್ಯ ಸದಸ್ಯರು ಹೇಳಿರುವ ವಿಷಯದ ಬಗ್ಗೆ ಬೇಗ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಹನುಮನಗೌಡ ಪಾಟೀಲ್.— ಮಾನ್ಯ ಅಧ್ಯಕ್ಷರೆ .....

ಅಧ್ಯಕ್ಷರು.— ಅರಿಯರ್ಸ್ ಪೇಮೆಂಟ್ ಬಗ್ಗೆ ಪ್ರಶ್ನೆ ಕಳುಹಿಸಿದರೆ ಉತ್ತರ ತರಿಸಿಕೊಡಬಹುದು. 334ರಲ್ಲಿ ಕೇಳಿದರೆ ಹೇಗೆ ?

ಶ್ರೀ ಹನುಮನಗೌಡ ಪಾಟೀಲ್.— ನಾನು ಪ್ರಶ್ನೆ ಕಳುಹಿಸಿದ್ದೆ. ಉತ್ತರ ಬರಲಿಲ್ಲ. ಆದ್ದರಿಂದ ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ರಾಯಚೂರು ಜಿಲ್ಲೆಯಲ್ಲಿ 1971–72ರಲ್ಲಿ ಬರಗಾಲ ಪರಿಹಾರ ಕಾರ್ಯಕ್ರಮದಲ್ಲಿ ದುಡಿದವರಿಗೆ 75 ಸಾವಿರ ರೂಪಾಯಿ ಪೇಮೆಂಟ್ ಆಗಬೇಕಾಗಿದ್ದು ಅದಿನ್ನೂ ಆಗಿಲ್ಲ. ಅಧಿಕಾರಿಗಳಿಗೆ ಮತ್ತಿತರರಿಗೆ ಒತ್ತಾಯ ತಂದರೂ ಪರಿಹಾರವಾಗಿಲ್ಲ. ಆದ್ದರಿಂದ ಅಲ್ಲಿನ ಜನರು ಧರಣಿ ಹೂಡುವ ಪ್ರಸಂಗ ಇದೆ ಎಂದು ಲಿಖಿತ ಮೂಲಕ ತಿಳಿಸಿದ್ದಾರೆ. ಆದ್ದರಿಂದ ಈ ವಿಷಯದಲ್ಲಿ ಮಾನ್ಯ ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಎಲ್. ಗೌಡ (ಕೃಷಿ ಮಂತ್ರಿ).— ಈ ಬಗ್ಗೆ ಮಾಹಿತಿ ತರಿಸಿ ವಿಚಾರ ಮಾಡುತ್ತೇನೆ.

ಶ್ರೀ ಹನುಮನಗೌಡ ಪಾಟೀಲ್.— ಬೇಗ ಪರಿಹಾರ ಕೊಡಬೇಕು.

ಶ್ರೀ ವಿ. ಎಲ್. ಪಾಟೀಲ್.— ರಾಯಚೂರು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಮದನಗೋಪಾಲ ನಾಯಕ್. – ದಿನಾಂಕ 16–1–84ರಂದು ಉಣ್ಣಿಗಿ ಗ್ರಾಮದಲ್ಲಿ ಬಸಪ್ಪ ಸೈದಪ್ಪ ಎಂಬುವವರನ್ನು ಪೋಲೀಸರೊಬ್ಬರು ಹೊಡೆದು ಸಾಯಿಸಿದ್ದಾರೆ. ಆದರ ವಿಷಯವಾಗಿ ಇವತ್ತಿನವರೆಗೂ ಯಾವ ರೀತಿಯ ಕ್ರಮ ಕೈಗೊಂಡಿಲ್ಲ. ಈಗ ಹಳ್ಳಿಯಲ್ಲಿ ಪೋಲೀಸರ ಭಯಭೀತಿ ಇದೆ. ಬಸಪ್ಪನನ್ನು ಹೊಡೆದು ಸಾಯಿಸಿರತಕ್ಕ ಪೊಲೀಸ್ ಕಾನ್‌ಸ್ಟೇಬಲ್ ಮೇಲೆ ಯಾವ ರೀತಿಯ ಕ್ರಮವನ್ನು ತೆಗೆದುಕೊಂಡಿದ್ದಾರೆ ಮತ್ತು ಆ ಹಳ್ಳಿಯಲ್ಲಿ ಪೋಲೀಸರ ಬಗ್ಗೆ ಇರುವ ಭಯಭೀತಿಯನ್ನು ಹೋಗಲಾಡಿ ಸುವುದಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ.— ಮಾನ್ಯ ಸಭಾಧ್ಯಕ್ಷರೆ, ಈ ವಿಚಾರದಲ್ಲಿ .....

ಶ್ರೀ ಗೋವಿಂದ ಪಿ. ಒಡೆಯರಾಜ್.— ಅದೇ ವಿಷಯವಾಗಿ ನಾನೂ ಹೇಳಬೇಕಾಗಿದೆ.

ಅಧ್ಯಕ್ಷರು.— ನೀವು 334ರ ಕೆಳಗಡೆ ಒಂದು ನೋಟೀಸ್ ಕೊಟ್ಟಿದ್ದೀರಿ. ಎರಡನೆಯದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದ ಪಿ, ಒಡೆಯರಾಜ್.— ಮಂತ್ರಿಗಳ ಉತ್ತರಕ್ಕೆ ಅನುಕೂಲವಾಗಲಿ ಎಂದು ಹೇಳುತ್ತಿದ್ದೇನೆ.

ಅಧ್ಯಕ್ಷರು.— ಅವರು ಉತ್ತರ ಕೊಡಲಿ. ಅವರಿಗೇನಾದರೂ ಅನಾನುಕೂಲವಾದರೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ರಮೇಶ್ ಜಿಗಜಿಣಗಿ.— ಈ ಪ್ರಕರಣದ ಬಗ್ಗೆ ಕೋಡೆಕಲ್ ಪೋಲೀಸ್ ಸ್ಟೇಷನ್‌ನಲ್ಲಿ ಕೇಸ್ ರಿಜಿಸ್ಟರ್ ಆಗಿದೆ. ಇದರಲ್ಲಿ ಇಬ್ಬರು ಪೋಲೀಸ್ ಪೇದೆಗಳು ಇನ್‌ವಾಲ್ವ್ ಆಗಿದ್ದು ನಾಗಭೂಷಣ್ ಎಂಬ ಪೋಲೀಸ್ ಪೇದೆಯನ್ನು ಅರೆಸ್ಟ್ ಮಾಡಿ ಜ್ಯುಡಿಷಿಯಲ್ ಕಸ್ಟಡಿಗೆ ಒಪ್ಪಿಸಿದ್ದಾರೆ. ಇನ್‌ವೆಸ್ಟಿಗೇಷನ್‌ನಡೆಯುತ್ತಿದೆ.

ಶ್ರೀ ಗೋವಿಂದ ಪಿ. ಒಡೆಯರಾಜ್.— ಇದರಲ್ಲಿ ಇನ್ನೊಬ್ಬ ಪೋಲೀಸ್ ಪೇದೆ ಇನ್‌ವಾಲ್ವ್ ಆಗಿದಾ ನೆ. ಈ ಪೋಲೀಸ್ ಸ್ಟೇಷನ್ನಿಗೆ ಸಂಬಂಧಪಡದ ಲಿಂಗಸುಗೂರು ಪೋಲೀಸ್ ಸ್ಟೇಷನ್ನಿಗೆ ಸೇರಿದ ಪೇದೆ ಇನ್‌ವಾಲ್ವ್ ಆಗಿದ್ದಾರೆ. ಕೋಡೆಕಲ್ ಪೋಲೀಸ್ ಸ್ಟೇಷನ್ನಿನ ಪೇದೆಯನ್ನು ಸಸ್ಪೆಂಡ್ ಮಾಡಿ ಇನ್‌ವೆಸ್ಟಿಗೇಷನ್ ಆಗುತ್ತಿದೆ. ಆದರೆ ಲಿಂಗಸುಗೂರು ಪೋಲೀಸ್ ಸ್ಟೇಷನ್ನಿನ ಪೇದೆ ಇದರಲ್ಲಿ ಇನ್‌ವಾಲ್ವ್ ಆಗಿರುವುದರಿಂದ ಆತನ ಮೇಲೆ ಏನು ಕ್ರಮ ಕೈಗೊಂಡಿದ್ದೀರೆಂಬುದನ್ನು ತಿಳಿಸಬೇಕು.

ಶ್ರೀ ರಮೇಶ್ ಜಿಗಜಿಣಗಿ.— ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿಸುತ್ತೇನೆ.

(iii) ಘಟಪ್ರಭಾ ಯೋಜನೆಯಲ್ಲಿ ಮುಳುಗಡೆ ಪ್ರದೇಶಕ್ಕೆ ಕುಡಿಯುವ ನೀರಿನ ವ್ಯವಸ್ಥೆ.

ಶ್ರೀ ಮಲ್ಲಾರಗೌಡ ಪಾಟೀಲ್.— ಘಟಪ್ರಭ ಯೋಜನೆಯಲ್ಲಿ ಮುಳುಗಡೆಯಾದ ಜನರಿಗೆ ಕುಡಿ ಯುವ ನೀರಿನ ವ್ಯವಸ್ಥೆಯನ್ನು 10 ವರ್ಷದಿಂದ ಮಾಡಿಕೊಟ್ಟಿಲ್ಲ. ಯೋಜನಾ ಇಲಾಖೆಯವರಾಗಲೀ, ಆರೋಗ್ಯ ಇಲಾಖೆಯವರಾಗಲೀ ಮಾಡುವುದಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. 11ನೇ ತಾರೀಖು

ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರು ಅಲ್ಲಿಗೆ ಹೋಗುತ್ತಿದ್ದ್ದ ರಾಜ್ಯದ ಲೋಕೋಪಯೋಗಿ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳೂ ಹೋಗುತ್ತಿದ್ದಾರೆ. ಈ ಯೋಜನೆಯ ಉದ್ಘಾಟನಾ ಸಮಾರಂಭ ಆಗುತ್ತಿದ್ದರೂ ಪುನರ್‌ವಸತಿ ಹೊಂದಿದ ಜನರಿಗೆ ಕುಡಿಯುವ ನೀರಿನ ಯೋಜನೆ ಹಾಕಿ ಕೊಂಡಿಲ್ಲ. ಇನ್ನೊಂದೆ ಯಾವುದಾದರೂ ನಿರ್ದಿಷ್ಟವಾದ ಇಲಾಖೆಗೆ ಕಾಮಗಾರಿಯೆಂದನ್ನು ಕೈಗೊಳ್ಳುವಂತೆ ಸರ್ಕಾರದವರು ಆದೇಶ ನೀಡಬೇಕಾಗಿ ಜನರ ಬೇಡಿಕೆಯಿದೆ. ಆದ್ದರಿಂದ ದೇಶಕ್ಕಾಗಿ ತ್ಯಾಗ ಮಾಡಿದ ಜನರಿಗೆ ಹೆಚ್ಚಿನ ಸವಲತ್ತು ಕೊಡದೇ ಹೋದರೆ ನಾವು ದೊಡ್ಡ ಪಾಪಕ್ಕೆ ಈಡಾಗಬೇಕಾಗುತ್ತದೆ. ಆದ್ದರಿಂದ ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಬಗ್ಗೆ ಹೇಳಿಕೆ ಕೇಳಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್ (ಮಾನ್ಯ ಗ್ರಾಮಾಭಿವೃದ್ಧಿ ಸಚಿವರು).— ಈ ವಿಷಯದಲ್ಲಿ ಲೀಸ್ಟ್‌ಕ್ರೆರು ತಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(iv) ದೆ. ಕ ಜಿಲ್ಲೆಯಲ್ಲಿ ಬಸ್ ಸೌಕರ್ಯಗಳನ್ನು ಒದಗಿಸುವುದು.

ಡಾ॥ ವಿ. ಎಸ್. ಆಚಾರ್ಯ. — ಸನ್ಮಾನ್ಯ ಅಧ್ಯಕ್ಷರೆ, ನಾಗರೀಕ ಜೀವನದಲ್ಲಿ ಸಾರಿಗೆ ಸಂಪರ್ಕದಲ್ಲಿ ಬಸ್ ವ್ಯವಸ್ಥೆ ಎಷ್ಟು ಅಗತ್ಯ ಎಂಬುದು ತಮಗೆ ಗೊತ್ತಿದೆ. ನಮ್ಮ ಜಿಲ್ಲೆಯ ಉತ್ತರ ಭಾಗದಲ್ಲಿ ಕಳೆದ ಎರಡು ದಿವಸಗಳಿಂದ ಬಸ್ ವ್ಯವಸ್ಥೆ ಅತ್ಯವ್ಯಸ್ತವಾಗಿ ಜೀವನಕ್ಕೆ ಕಷ್ಟವಾಗಿದೆ. ಉಡುಪಿ, ಕುಂದಾಪುರ, ಕಾರ್ಕಳ, ಸುರತ್ಕಲ್ ಮತ್ತು ಮುಲ್ಕಿ ಈ ಭಾಗಗಳಲ್ಲಿ ಯಾವ ಕಡೆಯೂ ನಿನ್ನೆ ಮೊನ್ನೆ ಬಸ್ ಇರಲಿಲ್ಲ. ಹಿಂದೆ ಬಸ್ ಮುಷ್ಕರವಾದಾಗ ಬೇರೆ ಬೇರೆ ಕಾರಣಗಳಿಗೆ ಬಸ್ ನಿಲ್ಲಿಸಿದ ನಿದರ್ಶನ ಇದೆ. ಆದರೆ ಈಗ ಯಾವ ಕಾರಣಕ್ಕಾಗಿ ಬಸ್ ನಿಲ್ಲಿಸಿದರು ಎಂಬುದು ಗೊತ್ತಾಗಲಿಲ್ಲ. ಅಲ್ಲಿ ವಿದ್ಯಾರ್ಥಿಗಳು ಮುಷ್ಕರ ಹೂಡಿದ್ದಾರೆಂದು ಕೆಲವರು ಹೇಳಿದರು. ಆದ್ದರಿಂದ ಉಡುಪಿಯಲ್ಲಿ ಮುಷ್ಕರ ಹೂಡಿದಂತಹ ವಿದ್ಯಾರ್ಥಿಗಳನ್ನು ಕರೆಸಿ ಅವರಿಗೆ ಪಾಸ್ ಕೊಡುವ ವ್ಯವಸ್ಥೆ ಮಾಡಲಾಗಿತ್ತದೆಯೆಂದು ಹೇಳಿದರು. ಆದರೂ ಇವತ್ತು ಕುಂದಾಪ್ರದಲ್ಲಿ ಬಸ್‌ಗಳ ಓಡಾಡುತ್ತಾ ಇಲ್ಲ. ನಿಟ್ಟೆಯಲ್ಲಿ ಸಹಾ ಪಾಲಿಟೆಕ್ನಿಕ್ ವಿದ್ಯಾರ್ಥಿಗಳು ಪಾಸ್ ಕನ್ಸೆಷನ್ ಕೊಡಬೇಕೆಂದು ಹೇಳಿದ್ದಾರೆ. ಅಲ್ಲಿನ ಬಸ್ ಮಾಲೀಕರಿಗೆ ಹಾಗೂ ಬಸ್ ಡ್ರೈವರ್‌ಗಳಿಗೆ ಹೇಳಿದ್ದಾರೆ. ಅಲ್ಲಿ ಬಸ್ ಹೋಗುವಾಗ ಜನ ಬಸ್‌ಗಳಿಗೆ ಡಾಂಬರು ಬಳಿದಿದ್ದಾರೆ. ಹಾಗೂ ಬಸ್‌ನ ಡ್ರೈವರ್ ಹಾಗೂ ಕಂಡಕ್ಟರ್‌ನ ಮುಖಕ್ಕೆ ಡಾಂಬರು ಬಳಿದಿದ್ದಾರೆ. ಇಂತಹ ಒಂದು ಪರಿಸ್ಥಿತಿ ಅಲ್ಲಿ ಎಂದೂ ನಡೆದಿರಲಿಲ್ಲ. ಅಲ್ಲಿ ಡಿ ಸಿ. ಇದ್ದಾರೆ. ಡಿ ಐ ಜಿ. ಇದ್ದಾರೆ; ಎಸ್.ಪಿ. ಇದ್ದಾರೆ. ಅವರೆಲ್ಲಾ ಏನು ಮಾಡುತ್ತಿದ್ದಾರೆ ? ಈ ಒಂದು ಸನ್ನಿವೇಶವನ್ನು ಉಪಯೋಗಿಸಿಕೊಂಡು ಅಲ್ಲಿ ಸಮಾಜ ದ್ರೋಹಿಗಳು ಲಾಭ ಪಡೆದುಕೊಳ್ಳುತ್ತಿದ್ದಾರೆ. ಇವತ್ತು ಬೆಳಿಗ್ಗೆ 8 ಗಂಟೆಯ ಸಮಯದಲ್ಲೂ ಬಸ್‌ಗಳು ಹೊರಟಿಲ್ಲವೆಂದು ಫೋನ್ ಬಂತು. ಸರ್ಕಾರ ಈ ಬಗ್ಗೆ ಪ್ರದೇಶ ಮಾಡಿ ಉಡುಪಿ, ಕುಂದಾಪುರ, ಕಾರ್ಕಳ, ನಿಟ್ಟೆ ಈ ಕಡೆಗಳಲ್ಲಿ ಪರಿಸ್ಥಿತಿಯನ್ನು ಸರಿಮಾಡಬೇಕು. ಅಲ್ಲಿ ವಿದ್ಯಾರ್ಥಿಗಳ ಜೊತೆ ಸಂಧಾನ ಆಗಿದ್ದರೂ ಸಹಾ ಬಸ್‌ಗಳು ಹೊರಟಿಲ್ಲ. ಇವತ್ತು ಅಲ್ಲಿ ಮಾಲೀಕರು ಮತ್ತು ಜಾಲಕರ ಮಧ್ಯೆ ಏನಾದರೂ ವೈಮನಸ್ಸವಾಗಿದೆಯೇ ಎಂದರೆ ಆ ಬಗ್ಗೆ ಏನೂ ಇಲ್ಲ ಎನ್ನುತ್ತಾರೆ. ಇದಕ್ಕೆ ಕಾರಣ ಏನು ಎಂಬುದು ಇಡೀ ಜಿಲ್ಲೆಗೆ ಇವತ್ತು ಗೊತ್ತಾಗಿಲ್ಲ. ಯಾವಾಗ ಪರಿಸ್ಥಿತಿ ನಾರ್ಮಲ್‌ಗೆ ಬರುತ್ತದೆ ಎಂದು ನಾನು ಕೇಳಬೇಕಾಗಿದೆ. ಇವತ್ತು ಅಲ್ಲಿಗೆ ಖಾಸಗೀ ಬಸ್‌ಗಳು ಹೋಗಲು ಸಾಧ್ಯವಾಗದಿದ್ದರೆ ದಯಮಾಡಿ ಮಂಗಳೂರು ಡಿಪೋದಿಂದ ಸರ್ಕಾರಿ ಬಸ್‌ಗಳನ್ನು ಅಲ್ಲಿ ಓಡಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಪಿ ಪ್ರಕಾಶ್.— ಈಗ ಸುಮಾರು ಒಂದು ವಾರದ ಹಿಂದೆ ನಾನು ಉಡುಪಿಗೆ ಹೋಗಿದ್ದೆ. ನಾನು ಅಲ್ಲಿಗೆ ಹೋದ ಸಂದರ್ಭದಲ್ಲಿ ಖಾಸಗಿ ಬಸ್ ಮಾಲೀಕರು ತಮ್ಮ ಬಸ್‌ಗಳ ಮೇಲೆ ಮಿಸುಗಾರರ ಬುಟ್ಟಿಗಳನ್ನು ಹಾಕುತ್ತಿಲ್ಲವೆಂದು ಜಗಳವಾಡುತ್ತಿದ್ದಾರೆಂಬ ವಿಷಯವನ್ನು ಕೇಳಿದೆ. ಹಾಗೆ ಯಾವ ಊರಿನಲ್ಲಿ ಜಗಳ ಆಗುತ್ತಿದೆ ಎಂಬ ವಿಷಯ ನನಗೆ ಗೊತ್ತಿಲ್ಲ. ಇದಾದಮೇಲೆ ಐ. ಟಿ. ಐ. ವಿದ್ಯಾರ್ಥಿಗಳು ಪಾಸ್ ಕನ್ಸೆಷನ್ ಕೊಡಬೇಕೆನ್ನುವ ಬಗ್ಗೆ ಕೇಳಿದ್ದಾರೆ. ಕೆ ಎಸ್ ಆರ್.ಟಿ.ಸಿ. ಯವರು ಕೊಡುವಂತೆ ಖಾಸಗೀ ಬಸ್‌ನವರೂ ರಿಯಾಯಿತಿ ಕೊಡಬೇಕೆಂದು. ಹೇಳಿ ಬಸ್ ಮಾಲೀಕರು ಮತ್ತು ಇವರ ನಡುವೆ ಭಿನ್ನಾಭಿಪ್ರಾಯ ಇದೆ ಎಂಬುದು ನನಗೆ ಗೊತ್ತಾಯಿತು. ಎಸ್ ಪಿ. ಯವರು ರಕ್ಷಣೆ ಕೊಡಬೇಕು ಎನ್ನುವ ಬಗ್ಗೆ ನಾನು ಆ ಸಂದರ್ಭದಲ್ಲಿ ಹೇಳಿದ್ದೆ. ಆದಾದ ಮೇಲೆ ಎರಡು ವಿಷಯಗಳ ಬಗ್ಗೆ ಮಾಹಿತಿ ಬಂದ ಕೂಡಲೇ ಖಂಡಿತವಾಗಿ ಕ್ರಮ ಕೈಗೊಂಡು ಮಾನ್ಯ ಸದಸ್ಯರಿಗೆ ಆ ಬಗ್ಗೆ ತಿಳಿಸುತ್ತೇನೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

Mr. Speaker.— Hon. Minister for Labour.

Sri Azeez Sait.— Sir, hon. Member Sri Surayanarayana Rao has expressed concern about the improper working of Khandasari units and the amenities under the law prevailing. The representatives of Khandasari units belonging to Sri surayanarayana Rao's